# ಶ್ರೀವೇದನಿಧಿತೀರ್ಥರು

## ಶ್ರೀಮನ್ಮಧ್ವಾಚಾರ್ಯರ ಮೂಲಮಹಾಸಂಸ್ಥಾನ ಶ್ರೀಮದುತ್ತರಾದಿಮಠ,

---

ಶ್ರೀಮದಾಚಾರ್ಯರು, ಶ್ರೀಪದ್ಮನಾಭತೀರ್ಥರು, ಶ್ರೀನರಹರಿ ತೀರ್ಥರು, ಶ್ರೀಮಾಧವತೀರ್ಥರು, ಶ್ರೀಅಭ್ಯತೀರ್ಥರು, ಶ್ರೀಜಯತೀರ್ಥರು, ಶ್ರೀವಿದ್ಯಾಧಿರಾಜತೀರ್ಥರು, ಶ್ರೀಕವೀಂದ್ರತೀರ್ಥರು, ಶ್ರೀವಾಗೀಶತೀರ್ಥರು, ಶ್ರೀರಾಮಚಂದ್ರತೀರ್ಥರು, ಶ್ರೀವಿದ್ಯಾನಿಧಿತೀರ್ಥರು ಇತ್ಯಾದಿಯಾಗಿ ಅನೇಕ ಮಹಾಭಾನುಭಾವರು ಈ ವೇದಾಂತಸಾಮ್ರಾಜ್ಯದಲ್ಲಿ ಪಟ್ಟಾಭಿಷಿಕ್ತರಾಗಿದ್ದಾರೆ.

ಈ ಸಂಸ್ಥಾನದಲ್ಲಿ ಸುವಿರಾಜಿತವಾದ ಮೂಲಸೀತಾಸಮೇತ ಮೂಲರಾಮ, ದಿಗ್ವಿಜಯರಾಮ, ವ್ಯಾಸಮುಷ್ಟಿ ಮುಂತಾದ 28 ಪ್ರತಿಮೆಗಳ ಸಂದರ್ಶನ ಜನ್ಮಜನ್ಮಾಂತರದ ಪುಣ್ಯದಿಂದ ಮತ್ತು ಪ್ರಾಚೀನರ ಪುಣ್ಯದಿಂದ ಮಾತ್ರ ಸಂಪನ್ನವಾಗುತ್ತದೆ. ಇಂಥ ವೇದಾಂತಸಾಮ್ರಾಜ್ಯದಲ್ಲಿ ಶ್ರೀಮದಾಚಾರ್ಯರಿಂದ 18 ನೆಯ ಯತಿಗಳಾಗಿ ಶ್ರೀವೇದನಿಧಿತೀರ್ಥರು ಸುವಿರಾಜಿತರಾದರು.

ಶ್ರೀವಿದ್ಯಾಧೀಶತೀರ್ಥರ ಕರಕಮಲಸಂಜಾತರು ಶ್ರೀವೇದನಿಧಿತೀರ್ಥರು.ಶ್ರೀವೇದನಿಧಿತೀರ್ಥರ ಮಹಿಮೆ ದೀಪವಿದ್ದಂತೆ. ಅದು ವಿಲಕ್ಷಣವಾದ ದೀಪ. ಅದು ಹೊರಗಿನ ದೀಪವಲ್ಲ. ಮನಸ್ಸಿನಲ್ಲಿ ಬೆಳಗುವ ದೀಪ, ಆ ದೀಪವನ್ನು ಎಲ್ಲರೂ ತಮ್ಮ ತಮ್ಮ ಮನಸ್ಸಿನಲ್ಲಿ ಬೆಳಗಿಸಿಕೊಂಡರು. ಮನಸ್ಸಿನಲ್ಲಿಯ ಅಜ್ಞಾನದುಧ್ವಾಂತವನ್ನು ಪರಿಹರಿಸಿಕೊಂಡರು. ಈ ಕಾರ್ಯವನ್ನು ನಾವೆಲ್ಲರೂ ಮಾಡಬೇಕು. ಅದಕ್ಕಾಗಿ ವೇದನಿಧಿತೀರ್ಥರ ಬಗ್ಗೆ ತಿಳಿಯಬೇಕು. ಮಾನಸಸರೋವಿಹಾರಿ ಪರಮಹಂಸ

ಶ್ರೀವೇದನಿಧಿತೀರ್ಥರು ಪರಮಹಂಸರು. ಮೌನಿಕುಲೋತ್ತಂಸರು, ಸಕಲಶಾಸ್ತ್ರಗಳಲ್ಲಿ ಪಾರಂಗತರು. ಅವರು ಮಾಡುವ ಪಾಠ-ಪ್ರವಚನಗಳು ಶಿಷ್ಯರ ಮನಸ್ಸನ್ನು ಆಕರ್ಷಿಸುತ್ತಿದ್ದವು. ಅವರ ಪಾಠ-ಪ್ರವಚನಗಳನ್ನು ಆಲಿಸಿದ ಶಿಷ್ಯರು ಧನ್ಯತೆಯನ್ನು ಅನುಭವಿಸುತ್ತಿದ್ದರು. ಹಂಸಪಕ್ಷಿಯು ಸದಾ ಮಾನಸಸರೋವರದಲ್ಲಿಯೇ ವಿಹರಿಸುತ್ತದೆ. ಹಾಗೆ ಎಲ್ಲ ಶಿಷ್ಯರ ಮಾನಸದಲ್ಲಿ ಶ್ರೀವೇದನಿಧಿತೀರ್ಥರೇ ವಿಹರಿಸಿದರು. ಎಲ್ಲರ ಮನಸ್ಸು ಶ್ರೀವೇದನಿಧಿತೀರ್ಥರನ್ನೇ ಸ್ಮರಿಸುತ್ತಿತ್ತು.

ಶ್ರೀವೇದನಿಧಿತೀರ್ಥರು ಪರಮಾತ್ಮನನ್ನು ಪಡೆದ ಕ್ರಮ ಅತಿ ಊರ್ಜಿತವಾಗಿತ್ತು. ಪರಿಶುದ್ಧವಾದ ವೈರಾಗ್ಯದಿಂದ ವಿರಾಜಿತರಾದರು. ಕಾಮಾದಿ ಅರಿಷಡ್ವರ್ಗಗಳನ್ನು ಗೆದ್ದರು. ವಿಜ್ಞಾನದಿಂದ ವಿಶಿಷ್ಟರಾದರು. ಅವರ ಈ ಸಾಧನೆಗೆ ಸಂತುಷ್ಟನಾದ ಪರಮಾತ್ಮ ಅವರಿಗೆ ಒಲಿದು ನಿಂತ.

ವೇದಾಂತಸಾಮ್ರಾಜ್ಯದಲ್ಲಿ ಪಟ್ಟಾಭಿಷಿಕ್ತರಾದ ವೇದನಿಧಿತೀರ್ಥರು ದಿಗ್ವಿಜಯಯಾತ್ರೆ ಯನ್ನು ಪ್ರಾರಂಭಿಸಿದರು. ಜಯಶಂಖಘೋಷ ಎಲ್ಲೆಡೆ ವ್ಯಾಪಿಸಿತು. ಆ ಘೋಷವನ್ನು ಕೇಳಿಯೇ ದುರ್ವಾದಿಗಳೆಲ್ಲರೂ ದೂರ ಓಡಿದರು. ಎಲ್ಲ ದುರ್ವಾದಿಗಳನ್ನು ಸೋಲಿಸಿದರು. ಶ್ರೀಮದಾಚಾರ್ಯರ ಸಿದ್ಧಾಂತವನ್ನು ಎಲ್ಲೆಡೆ ಪ್ರತಿಷ್ಠಾಪನೆ ಮಾಡಿದರು.

ಹೋದಲ್ಲೆಲ್ಲ ಕಡೆ ರಾಜರು, ಮಂತ್ರಿಗಳು ವೇದನಿಧಿತೀರ್ಥರ ಸಂದರ್ಶನ ಮಾಡಿಕೊಂಡರು. ಅವರಿಂದ ವೇದನಿಧಿತೀರ್ಥರು ಉತ್ತಮವಾದ ಕಾಣಿಕೆಗಳನ್ನು ಸಮರ್ಪಿಸಿ ಕೊಂಡರು. ಎಲ್ಲರಿಗೂ ಧರ್ಮಮಾರ್ಗವನ್ನು ಉಪದೇಶಿಸಿ ಧರ್ಮಾಸಕ್ತರಾಗುವಂತೆ ಮಾಡಿದರು.

## ಕಾಮಾದಿಗಳನ್ನು ಗೆದ್ದರು, ಕಾಮಾದಿಗಳಲ್ಲಿ ಆಸಕ್ತರು

ಶ್ರೀವೇದನಿಧಿ ತೀರ್ಥರು ಕಾಮಾದಿಗಳನ್ನು ಗೆದ್ದಿದ್ದರು. ಆದರೂ ಕಾಮಾದಿಗಳಲ್ಲಿ ಆಸಕ್ತರಾದರು. ಶ್ರೀಹರಿಯನ್ನು ಪಡೆಯುವ ಕಾಮ ಅವರಲ್ಲಿ ಇತ್ತು. ಶ್ರೀಹರಿಯನ್ನು ಮರೆತಾಗ ಕ್ರೋಧ ತಾಳಿದರು. ಶ್ರೀಹರಿಯ ಕಥೆಯನ್ನು ಶ್ರವಣ ಮಾಡುವಲ್ಲಿ ಲೋಭಿಗಳಾದರು. ಶ್ರೀಹರಿಯನ್ನು ಸ್ಮರಿಸುವಲ್ಲಿ ಮೋಹವನ್ನು, ಪರವಶತ್ವವನ್ನು ಪಡೆದರು. ಶ್ರೀಹರಿಯನ್ನು ನೋಡುವಲ್ಲಿ ಮದ-ಸಂತೋಷವನ್ನು ಹೊಂದಿದರು. ಶ್ರೀಹರಿಯ ದ್ವೇಷಿಗಳಲ್ಲಿ ಮಾತ್ಸರ್ಯವನ್ನು ತೋರಿಸಿದರು. ಹೀಗೆ ಕಾಮಾದಿಗಳನ್ನು ಪಡೆದು ಜೀವನವನ್ನು ಸಾರ್ಥಕ ಮಾಡಿಕೊಂಡರು.

## ಶ್ರೀಜನಾರ್ದನಾಚಾರ್ಯರಿಗೆ ಮಾಡಿದ ಅನುಗ್ರಹ

ಶ್ರೀವಿದ್ಯಾಧೀಶವಿಜಯ ಮುಂತಾದ ಅನೇಕ ಪ್ರಬಂಧಗಳನ್ನು ರಚಿಸಿದ ಮಹಾಕವಿಗಳು ಶ್ರೀಜನಾರ್ದನಾಚಾರ್ಯರು. ಅಂಥ ಜನಾರ್ದನಾಚಾರ್ಯರು ಪ್ರತಿನಿತ್ಯವೂ ಶ್ರೀವೇದನಿಧಿತೀರ್ಥರ ಸನ್ನಿಧಾನದಲ್ಲಿ ಮಹಾಭಾರತದ ಪ್ರವಚನ ಮಾಡುತ್ತಿದ್ದರು. ಅವರು ಮಾಡುತ್ತಿರುವ ಪ್ರವಚನ ಸರ್ವರಿಗೂ ರೋಮಾಂಚನಕಾರಿಯಾಗಿತ್ತು. ಆದಿಪರ್ವದಿಂದ ಮುಕ್ತಾಯದವರೆಗೆ ಮಹಾಭಾರತವನ್ನು ಕೇಳಿದ ಶ್ರೀವೇದನಿಧಿತೀರ್ಥರು ಜನಾರ್ದನಾಚಾರ್ಯರನ್ನು ತಮ್ಮ ಕರುಣಾಸುಧಾರಸಾಭಿಷೇಕದಿಂದ ಅನುಗ್ರಹಿಸಿದರು.

## ಭಕ್ತಜನೋದ್ಧಾರ

ದುರ್ವಾದಗಳ ನಿರಾಕರಣ, ಸದ್ವಾದಗಳ ಪ್ರಚಾರದ ನಿಮಿತ್ತದಿಂದ ಪುಣ್ಯಕ್ಷೇತ್ರಗಳಲ್ಲಿ ಸಂಚರಿಸಿದರು. ಆಯಾ ಪುಣ್ಯತೀರ್ಥಗಳಲ್ಲಿ ಅವಗಾಹನ ಮಾಡಿದರು. ಅಲ್ಲಲ್ಲಿ ಸನ್ನಿಹಿತನಾದ ಪರಮಾತ್ಮನ ಸಂದರ್ಶನ ಮಾಡಿಕೊಂಡರು. ಶ್ರೀಮಠದ ಸಂಸ್ಥಾನಪ್ರತಿಮೆಗಳ ಸಂದರ್ಶನ, ತಪ್ತಮುದ್ರಾಧಾರಣ, ಮಂತ್ರೋಪದೇಶ, ತತ್ತ್ವೋಪದೇಶಗಳಿಂದ ಎಲ್ಲ ಭಕ್ತರನ್ನು ಉದ್ಧರಿಸಿದರು.

ಶ್ರೀವೇದನಿಧಿ ತೀರ್ಥರು ಜನ್ಮದಿಂದಲೇ ಪರಿಶುದ್ಧವಾದ ಹೃದಯ ಉಳ್ಳವರು, ಸೂರ್ಯ-ವಂಶದಲ್ಲಿ ಅವತರಿಸಿದ, ಶ್ರೀರಾಮನ ಮೂಲಪ್ರತಿಮೆಯ ಪೂಜೆಯನ್ನು ಅತಿವಿಶಿಷ್ಟವಾಗಿ ಸುಸಂಪನ್ನಗೊಳಿಸಿದರು. ಅವರ ಪೂಜೆಗೆ ಒಲಿದ ಶ್ರೀರಾಮನ ಪ್ರತಿಮೆಯಲ್ಲಿ ಅಪ್ರತಿಮವಾದ ಮಂದಹಾಸ ಕಿರಣಗಳು ಸೂಸುತ್ತಿದ್ದವು. ಆ ಮಂದಹಾಸದ ಕಿರಣಗಳಿಂದ ಶ್ರೀವೇದನಿಧಿ

ತೀರ್ಥರನ್ನು ಪವಿತ್ರುಗೊಳಿಸುತ್ತಿದ್ದ ಶ್ರೀರಾಮ, ನೋಡುಗರೆಲ್ಲರಿಗೂ ಮಹೋತ್ಸವವಾಗಿ ಈ ಪ್ರಸಂಗ ಗೋಚರಿಸುತ್ತಿತ್ತು.

## ವಿಜಯಪುರದಲ್ಲಿ ಮುರಾರಿರಾಜನಿಂದ ಸನ್ಮಾನ

ತೀರ್ಥಯಾತ್ರಾಕ್ರಮದಿಂದ ಶ್ರೀವೇದನಿಧಿತೀರ್ಥರು ವಿಜಯಪುರಕ್ಕೆ ದಿಗ್ವಿಜಯ ಮಾಡಿದರು. ಅಲ್ಲಿ ಅನೇಕ ವಿದ್ವಾಂಸರು. ದುರ್ಮತಗಳನ್ನು ಪ್ರಚಾರ ಮಾಡುವಲ್ಲಿ ಪರಿನಿಷ್ಠಿತರು. ನಿಸ್ಸಿಮರು. ಅವರೆಲ್ಲರೂ ಅಗ್ನಿಗೆ ಸಮಾನರು. ಅವರ ಸನಿಹ ಸುಳಿಯುವ ಸಮರ್ಥರು ಯಾರೂ ಇಲ್ಲ. ಜೊತೆ ಮಾತನಾಡಲು ಸಾಧ್ಯವೇ ಇಲ್ಲ. ವಾದ ಮಾಡುವುದು ದೂರ.

ಅಲ್ಲಿ ಮುರಾರಿ ಎಂಬ ರಾಜ. ಮುರಾರಿರಾಜನಿಗೆ ಅಲ್ಲಿಯ ವಿದ್ವಾಂಸರೆಲ್ಲರೂ ಹೇಳಿದರು. ವೇದನಿಧಿತೀರ್ಥರು ಈಗ ಬಹಳ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಆದರೇ ಅವರು ವಿದ್ವಾಂಸರೇ ಅಲ್ಲ. ಸಾಧ್ಯವಾದರೇ ಅವರೊಂದಿಗೆ ವಾದವನ್ನು ಏರ್ಪಡಿಸಿರಿ. ಅವರ ಪಾಂಡಿತ್ಯ ಎಷ್ಟೊಂದು ನಾವು ನಿರೂಪಿಸುತ್ತೇವೆ ಎಂದು.

ಆದರೇ ಮುರಾರಿರಾಜನಿಗೆ ವೇದನಿಧಿತೀರ್ಥರಲ್ಲಿ ಬಹಳ ಆದರ, ವಿದ್ವಾಂಸರ ಮಾತನ್ನು ಮೀರಲು ತನಗೆ ಆಗಲಿಲ್ಲ. ಸಂಭ್ರಮಾಶ್ಚರ್ಯಾದರಗಳಿಂದ ಮುರಾರಿರಾಜ ಶ್ರೀವೇದನಿಧಿತೀರ್ಥರಿಗೆ ಆಹ್ವಾನ ನೀಡಿದ.

ಅನುಗ್ರಹ ಮಾಡುವುದಕ್ಕಾಗಿ ದಿಗ್ವಿಜಯ ಮಾಡಿದ ವೇದನಿಧಿತೀರ್ಥರ ಪಾದಪೂಜೆಯನ್ನು ಮಾಡಿದ. ಆ ವಾದಿಗಳ ಸಂಶಯವನ್ನು ಶ್ರೀಪಾದರ ಮುಂದೆ ಅನುವಾದ ಮಾಡಿದ.

ಗುರುಗಳೇ! ಇಲ್ಲಿಯ ವಾದಿಗಳು ನಿಮ್ಮ ಬಗ್ಗೆ ಈ ವಿಧವಾಗಿ ಮಾತನಾಡಿದ್ದಾರೆ. ಆ ಮಾತನ್ನು ಅನುವಾದ ಮಾಡುವುದು ಕೂಡಾ ಪಾಪಕರ. ಆದರೂ ತಾವು ನನ್ನನ್ನು ಕ್ಷಮಿಸಬೇಕು. ಈ ರೀತಿಯಾಗಿ ಹೇಳಿ ಮುರಾರಿ ಮಾತನಾಡಿದ. ಗುರುಗಳೇ! ನಿಮಗೆ ಶಾಸ್ತ್ರಗಳಲ್ಲಿ ಪಾಂಡಿತ್ಯವೇ ಇಲ್ಲವಂತೆ. ನಿಮ್ಮ ಶಿಷ್ಯರಿಗೆ ಕಿಂಚಿತ್ತು ಪಾಂಡಿತ್ಯ ಇದೆಯಂತೆ. ಆದ್ದರಿಂದ ತಾವು ಈಗ ಇಲ್ಲಿಯ ವಾದಿಗಳೊಂದಿಗೆ ವಾದ ಮಾಡಬೇಕು. ಅದನ್ನು ನಾವೆಲ್ಲರೂ ನಿರ್ದುಷ್ಟ ಬುದ್ಧಿಯಿಂದ ಆಲಿಸುತ್ತೇವೆ. ಎಲ್ಲರಿಗೂ ಯಾರ ಪಾಂಡಿತ್ಯ ಎಷ್ಟೆಂದು ಸಿದ್ಧವಾಗುತ್ತದೆ. ಹೀಗೆ ಮುರಾರಿರಾಜನು ಹೇಳಿದ ಕೂಡಲೇ ವೇದನಿಧಿತೀರ್ಥರು ವಾದಕ್ಕೆ ಸಿದ್ಧರಾದರು. ಅಲ್ಲಿಯ ವಿದ್ವಾಂಸರು ಅಗ್ನಿಯಂತೆ ಸಂತಾಪಕರವಾಗುವಂತೆ ವಾದ

ಮಾಡಿದರು. ಅವರ ಪ್ರತಿಯೊಂದು ವಚನವೂ ಅಗ್ನಿಯಂತೆ ಪ್ರಜ್ವಲಿಸುತ್ತಿತ್ತು. ನಂತರ ವೇದನಿಧಿತೀರ್ಥರು ವಾದ ಮಾಡಲು ಪ್ರಾರಂಭಿಸಿದರು. ಮಹಾಮೇಘವು ಕಾಡಿಚ್ಚನ್ನು ನಾಶಪಡಿಸುವಂತೆ ದುರ್ವಾದಿಗಳ ವಾದವನ್ನು ವೇದನಿಧಿತೀರ್ಥರು ಕ್ಷಣದಲ್ಲಿಯೇ ಪ್ರಶಾಂತಗೊಳಿಸಿದರು.

ರಾಜನು ಪ್ರತ್ಯಕ್ಷವಾಗಿಯೇ ವೇದನಿಧಿ ತೀರ್ಥರ ವಾದಕ್ರಮವನ್ನು ಕಂಡ. ಆಶ್ಚರ್ಯಚಕಿತನಾದ. ಗುರುಗಳ ಪಾಂಡಿತ್ಯಕ್ಕೆ ಎಲ್ಲರೂ ಪರಿತುಷ್ಟರಾದರು. ವಾದಿಗಳು ನಾಚಿಕೆಯಿಂದ ತಲೆ ತಗ್ಗಿಸಿದರು. ಮುರಾರಿರಾಜ ಸಂತುಷ್ಟನಾಗಿ ಗುರುಗಳಾದ ವೇದನಿಧಿತೀರ್ಥರನ್ನು ಆರಾಧಿಸಿದ. ನಾನಾವಿಧವಾದ ವೈಭವಗಳಿಂದ ವೇದನಿಧಿತೀರ್ಥರನ್ನು ಆದರಿಸಿದ. ಮತ್ತೆ ಮತ್ತೆ ಅತಿವಿಶಿಷ್ಟವಾಗಿ ಸ್ತೋತ್ರ ಮಾಡಿದ. ಆಗ ಆ ಮುರಾರಿರಾಜ ತೆಗೆದ ಉದ್ಗಾರ ಅತಿ ವಿಶಿಷ್ಟವಾಯಿತು -

ಅನ್ಯಾ ಸನ್ಯಾಸವೃತ್ತಿಸ್ತ ಶ್ರೀಮದ್ವೇದನಿಧೇ ಗುರೋ । ಯತೋ ಯುತ್ಪದಾಸಂಗಾದುತ್ತಮಃ ಪುರುಷೋ ಭವೇತ್ |

ಹೇವೇದನಿಧಿಗುರುಗಳೇ! ನಿಮ್ಮ ಸಾ ಸವೃತ್ತಿ ಅನ್ಯಾದೃಶವಾಗಿದೆ.ಅತಿವಿಲಕ್ಷಣವಾಗಿದೆ. ಯಾಕೆಂದರೇ ಯುತ್ಪತ್ಪದಾಸಂಗದಿಂದ ಉತ್ತಮಪುರುಷನಾಗುತ್ತಾನೆ. ಇಷ್ಟು ಸಾಮಾನ್ಯ ಅರ್ಥ. ಇಲ್ಲಿಯ ಚಮತ್ಕಾರ ಹೀಗೆ ತಿಳಿಯಬೇಕು.

ವ್ಯಾಕರಣಶಾಸ್ತ್ರದ ನ್ಯಾಸವೃತ್ತಿಯಲ್ಲಿ ಒಂದು ನಿಯಮ ಇದೆ. ಯುತ್ ಎಂಬ ಪದ ಇದ್ದಾಗ ಮಧ್ಯಮಪುರುಷ ಪ್ರಯೋಗವಾಗುತ್ತದೆ. ಉದಾಹರಣೆಗಾಗಿ ತ್ವಂ ಎಂಬ ಪದದ ಸಂಬಂಧ ಇದ್ದಾಗ ತ್ವಂ ಗಚ್ಛಸಿ, ತ್ವಂ ಪಠಸಿ ಇತ್ಯಾದಿಯಾಗಿ ಮಧ್ಯಮಪುರುಷವಾಗುತ್ತದೆ. ಆದರೇ ವೇದನಿಧಿತೀರ್ಥರ ಸನ್ಯಾಸವೃತ್ತಿ ವ್ಯಾಕರಣ ನ್ಯಾಸವೃತ್ತಿಗಿಂತಲೂ ವಿಭಿನ್ನವಾಗಿದೆ.

ಯುಷ್ಮ್ಯತ್ಪದದ ಸಂಬಂಧ ಇದ್ದಾಗಲೂ ಮಧ್ಯಮಪುರುಷವಾಗದೇ ಉತ್ತಮಪುರುಷವಾಗುತ್ತದೆ ಎಂಬುದೇ ನಿಮ್ಮ ಮಹಿಮೆ. ಇದು ವಿರೋಧ.

ಆದರೇ ಇಲ್ಲಿಯ ಪದಗಳ ಅರ್ಥವನ್ನು ಬೇರೆಯಾಗಿ ತಿಳಿದರೇ ವಿರೋಧ ಶಾಂತವಾಗುತ್ತದೆ. ಇಲ್ಲಿ ಯುಷ್ಯತ್ಪದ ಎಂದರೇ ತ್ವಂ ಎಂಬ ಪದ ಎಂದು ಅರ್ಥವಲ್ಲ. ನಿಮ್ಮ ಪಾದಗಳು ಎಂದು ಅರ್ಥ. ನಿಮ್ಮಪಾದಗಳ ಸಂಬಂಧ ಇದ್ದಾಗ ಉತ್ತಮಪುರುಷನಾಗುತ್ತಾನೆ. ಅಂದರೇ ನಿಮ್ಮ ಪಾದಗಳನ್ನು ನಂಬಿದವನು ಉತ್ತಮ ಪುರುಷನಾಗುತ್ತಾನೆ ಎಂದು ಅರ್ಥ. ಹೀಗೆ ಚಮತ್ಕಾರದಿಂದ ವೇದನಿಧಿತೀರ್ಥರನ್ನು ಮುರಾರಿರಾಜ ಕೊಂಡಾಡುತ್ತಾನೆ.

ಹೀಗೆ ಕ್ರಮವಾಗಿ ತೀರ್ಥಯಾತ್ರೆಗಳನ್ನು ಮಾಡುತ್ತ, ಪರಮತನಿರಾಕಣಪೂರ್ವಕ ಸ್ವಮತಸಂಸ್ಥಾಪನೆಯನ್ನು ಮಾಡುತ್ತ ಪಾಂಡುರಂಗನ ಕ್ಷೇತ್ರವಾದ ಪಂಢರಪುರಕ್ಕೆ ದಿಗ್ವಿಜಯ ಮಾಡಿದರು.

ಪ್ರತಿನಿತ್ಯವೂ ತಪ್ಪದೇ ಗುರುಗಳಾದ ವಿದ್ಯಾಧೀಶತೀರ್ಥರನ್ನು ಆರಾಧಿಸಿದರು. ಅವರ ಗುಣಗಳ ಸ್ಮರಣೆಯನ್ನು ಮಾಡಿದರು. ಭಕ್ತರಿಂದ ಮಾಡಿಸಿದರು. ಶ್ರೀಸಂಸ್ಥಾನಪ್ರತಿಮೆಗಳನ್ನು ಆರಾಧಿಸಿದರು. ಶಾಸ್ತ್ರಗಳ ಸಾರವನ್ನು ಶಿಷ್ಯರಿಗೆ ಉಪದೇಶಿಸಿದರು. ಅಲ್ಲಿ ಸನ್ನಿಹಿತನಾದ

ವಿಠಲನ ಆರಾಧನೆಯನ್ನು ವಿಶಿಷ್ಟವಾಗಿ ಮಾಡಿದರು. ಹೀಗೆ ದಿನಗಳನ್ನು ಸಾರ್ಥಕಪಡಿಸಿ ಕೊಂಡರು. ಶಿಷ್ಯರ ದಿನಗಳು ಸುದಿನಗಳಾಗುವಂತೆ ಮಾಡಿದರು.

## ಶ್ರೀವೇದನಿಧಿ ತೀರ್ಥರು ವೃಂದಾವನಸ್ಥರಾದರು

ಯತಿಶ್ರೇಷ್ಠರಾದ ವೇದನಿಧಿತೀರ್ಥರು ಕಾರ್ತಿಕ ಶುಕ್ಲಪಕ್ಷದ ಏಕಾದಶಿ ಹರಿವಾಸರದ ದಿನದಲ್ಲಿ ಹರಿಪದವನ್ನು ಸೇರಿದರು. ಶ್ರೀವೇದನಿಧಿತೀರ್ಥರ ವೃಂದಾವನ ಪ್ರವೇಶದ ಎಲ್ಲ ತಂತ್ರಗಳು ಮಂತ್ರೋಕ್ತಪ್ರಕಾರವಾಗಿ ಸುಸಂಪನ್ನಗೊಂಡವು. ವೇದನಿಧಿತೀರ್ಥರ ಅಗಲುವಿಕೆಯನ್ನು ಸಹಿಸಿಕೊಳ್ಳಲು ಭಕ್ತರಿಂದ ಸಾಧ್ಯವಾಗಲಿಲ್ಲ, ಧೈರ್ಯಶಾಲಿಗಳು ಕೂಡಾ ಧೈರ್ಯವನ್ನು ಕಳೆದುಕೊಂಡರು. ಇನ್ನು ಮುಂದಿನ ವೇದಾಂತಸಾಮ್ರಾಜ್ಯದ ಅಧಿಪತಿ ಗಳಾರೆಂದು ವ್ಯಾಕುಲಚಿತ್ತರಾದರು. ಆದರೇ ಅವರ ವ್ಯಾಕುಲ ಕ್ಷಣಕಾಲ ಮಾತ್ರವಾಗಿತ್ತು. ಮತ್ತೊಬ್ಬ ಸೂರ್ಯ ವೇದಾಂತಸಾಮ್ರಾಜ್ಯದ ವಿಷ್ಣುಪದದಲ್ಲಿ ಸುವಿರಾಜಿತನಾಗಲು ಸಿದ್ದನಾಗಿದ್ದ. ಎಲ್ಲರ ದುಗುಡವೆಂಬ ಕಗ್ಗತ್ತಲೆನ್ನು ಸಂಹರಿಸಲು ಸಿದ್ದನಾಗಿದ್ದ, ಯಾರು ಆ ಸೂರ್ಯ..? ......

********